ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಸಂಪೂರ್ಣವಾಗಿ ಒಳಪಟ್ಟಿದೆ)

Phone: 08193-271533
Fax : 08193-226446
e:mail:eehiriyurdvn.work@gmail.com

ಕಾರ್ಯನಿರ್ವಾಹಕ ಇಂಜಿನಿಯರ್(ವಿ).,
ಕಾ ಮತ್ತು ಪಾ, ವಿಭಾಗ, ಬೆವಿಕಂ,
ಚಳ್ಳಕೆರೆ ರಸ್ತೆ, ಹಿರಿಯೂರು.

ಕ್ರಮ ಸಂಖ್ಯೆ: ಕಾನಿಇಂ(ವಿ)/ಸಕಾನಿಇಂ(ವಿ)(ಕ)/ಸ.ಇಂ-1/2020-21 1989

ದಿನಾಂಕ: 20-06-2020

ಲಗತ್ತು: 11 ಪ್ರತಿಗಳು

ಉಪ ಅರಣ್ಯ ಸಂರಕ್ಷಣಾ ಅಧಿಕಾರಿ,
ಚಿತ್ರದುರ್ಗ ವಿಭಾಗ,
ಚಿತ್ರದುರ್ಗ.

ಮಾನ್ಯರೇ,

**ವಿಷಯ:** ಹಿರಿಯೂರು ವಿಭಾಗದ ಮೊಳಕಾಲ್ಮೂರು ಉಪವಿಭಾಗದ ರಾಂಪುರ ಶಾಖಾ ವ್ಯಾಪ್ತಿಯ ಬರುವ ಬಾಂಡ್ರವಿ ಮತ್ತು ಸಂತೇಗುಡ್ಡ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ 11ಕೆವಿ ನಿರಂತರ ಜ್ಯೋತಿ ಮಾರ್ಗ ರಚನೆ ಮಾಡುವ ಬಗ್ಗೆ.

**ಉಲ್ಲೇಖ:**
1. ಮಾನ್ಯ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಯೋಜನೆ, ಬೆವಿಕಂ, ಬೆಂಗಳೂರು ರವರ ಪತ್ರ ಸಂಖ್ಯೆ: 5836-38 ದಿನಾಂಕ: 31.01.2019.
2. ತಮ್ಮ ಕಛೇರಿಯ ಪತ್ರ ಸಂಖ್ಯೆ: ಸಿ.ಆರ್-17/2016-17 ದಿನಾಂಕ: 07.02.2017.
3. ಈ ಕಛೇರಿಯ ಪತ್ರ ಸಂಖ್ಯೆ: 10579-83 ದಿನಾಂಕ: 15.02.2019.
4. ಅರಣ್ಯಾಧಿಕಾರಿ, ಮೊಳಕಾಲ್ಮೂರು ವಲಯ ರವರ ಕಛೇರಿಯ ಪತ್ರ ಸಂಖ್ಯೆ: 447 ದಿನಾಂಕ: 22.02.2019.
5. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ, ಬೆವಿಕಂ, ಉಪವಿಭಾಗ, ಮೊಳಕಾಲ್ಮೂರು ರವರ ಪತ್ರ ಸಂಖ್ಯೆ: 13 ದಿನಾಂಕ: 04.04.2019.
6. ತಮ್ಮ ಕಛೇರಿಯ ಪತ್ರ ಸಂಖ್ಯೆ: 936 ದಿನಾಂಕ: 12.06.2020.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಮೂಲಕ ತಮ್ಮ ಗಮನಕ್ಕೆ ತರಬಯುಸುವುದೇನೆಂದರೇ, ಹಿರಿಯೂರು ವಿಭಾಗದ ಮೊಳಕಾಲ್ಮೂರು ಉಪವಿಭಾಗದ ರಾಂಪುರ ಶಾಖಾ ವ್ಯಾಪ್ತಿಯ ಬರುವ ಬಾಂಡ್ರವಿ ಮತ್ತು ಸಂತೇಗುಡ್ಡ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ 11ಕೆವಿ ನಿರಂತರ ಜ್ಯೋತಿ ಮಾರ್ಗ ರಚನೆಗೆ ಸಂಬಂಧಿಸಿದಂತೆ ಈಗಾಗಲೇ ಅರಣ್ಯಾಧಿಕಾರಿ, ಮೊಳಕಾಲ್ಮೂರು ವಲಯ ರವರು ಮೇಲ್ಕಂಡ ಉಲ್ಲೇಖ(4)ರ ಪತ್ರದ ದಿನಾಂಕ: 22.02.2019 ರಲ್ಲಿ ಸೂಚಿಸಿರುವಂತೆ ನ್ಯೂನ್ಯತೆಗಳನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಕಾ ಮತ್ತು ಪಾ, ಬೆವಿಕಂ, ಉಪವಿಭಾಗ, ಮೊಳಕಾಲ್ಮೂರು ರವರು ಸರಿಪಡಿಸಿ ದಿನಾಂಕ : 04.04.2019 ರಂದು ಸದರಿಯವರ ನಿರ್ದೇಶನದಂತೆ 11ಕೆವಿ ಮಾರ್ಗಗಳ ಕಂಬಗಳ ಗುರುತು ಹಾಗು ಇನ್ನಿತರೆ ನ್ಯೂನ್ಯತೆಗಳನ್ನು ಸರಿಪಡಿಸಿ ತಾವುಗಳ ಸೂಚಿಸಿದಂತೆ, ಅರಣ್ಯಾಧಿಕಾರಿ, ಮೊಳಕಾಲ್ಮೂರು ವಲಯ ರವರ ಕಛೇರಿಗೆ ಮೇಲ್ಕಂಡ ಉಲ್ಲೇಖ(5)ರಲ್ಲಿ ಸಲ್ಲಿಸಲಾಗಿರುತ್ತದೆ.

ಮುಂದುವರೆದು ತಾವುಗಳು ಮೇಲ್ಕಂಡ ಉಲ್ಲೇಖ(6)ರ ಪತ್ರದ ದಿನಾಂಕ: 12.06.2020 ರ 2ನೇ ಪ್ಯಾರದಲ್ಲಿ ಸರ್ವೆ ಮಾಡಿಲ್ಲ ಎಂದು ತಿಳಿಸಿದ್ದೀರಿ ಆದರೆ ಈಗಾಗಲೇ ಮೇಲೆ ತಿಳಿಸಿರುವಂತೆ ಅರಣ್ಯಾಧಿಕಾರಿ, ಮೊಳಕಾಲ್ಮೂರು ವಲಯ ರವರ ಸೂಚನೆ ಮೇರೆಗೆ ವರದಿಯನ್ನು ದಿನಾಂಕ: 04.04.2019 ರಂದು ಸಲ್ಲಿಸಲಾಗಿರುತ್ತದೆ. ಸದರಿ ಕಾಮಗಾರಿಯೂ ಅತ್ಯಂತ ತುರ್ತು ಕಾಮಗಾರಿಯಾಗಿದ್ದು, ಬಾಂಡ್ರವಿ ಮತ್ತು ಸಂತೇಗುಡ್ಡ ಗ್ರಾಮದ ಸುತ್ತಮುತ್ತಲಿನ 06 ಹಳ್ಳಿಗಳಿಗೆ ನಿರಂತರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕ ನೀಡುವಂತೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಮೌಖಿಕವಾಗಿ ಸೂಚಿಸಿರುತ್ತಾರೆ. ಈಗಾಗಿ ಯಾವುದೇ ಕಾರಣಕ್ಕೂ ಪ್ರಸ್ತಾವನೆಯನ್ನು ಹಿಂಪಡೆಯುವ ಹಾಗೂ ಕಡತವನ್ನು ಮುಕ್ತಾಯಗೊಳಿಸುವ ಪ್ರಸ್ತಾವನೆ ಇರುವುದಿಲ್ಲ ಆದ್ದರಿಂದ ಈಗಾಗಲೇ ಸಲ್ಲಿಸಿರುವ ಡಿ-ಮಾರ್ಕೇಷನ್ ಪ್ರಕಾರ ಕಾಮಗಾರಿಯನ್ನು ಮುಂದುವರೆಸಲು ತಮ್ಮ ಸಿಬ್ಬಂದಿ ವರ್ಗಕ್ಕೆ ಸೂಕ್ತ ನಿರ್ದೇಶನ ನೀಡಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ. ಹಾಗು ಇದಕ್ಕೆ ಸಂಬಂಧಿಸಿದ ಮೊತ್ತವನ್ನು ಮತ್ತು ಕಾಮಗಾರಿಯನ್ನು ಬೆವಿಕಂ ವತಿಯಿಂದ ಕೈಗೊಳ್ಳಲು ನಾವುಗಳು ಸಿದ್ದರಿದ್ದೇವೆ.

ತಮ್ಮ ವಿಶ್ವಾಸಿ,
20/6
ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಪಾ, ಕಾ ಮತ್ತು ಪಾ ವಿಭಾಗ, ಬೆವಿಕಂ,
ಹಿರಿಯೂರು.

ಸ್ವೀಕೃತಿ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಚಿತ್ರದುರ್ಗ ಪ್ರಾದೇಶಿಕ ವಿಭಾಗ, ಚಿತ್ರದುರ್ಗ.
ದಿನಾಂಕ: 20-6-2020

REDMI K20 PRO
AI TRIPLE CAMERA

Scanned with CamScanner